# ಅಂತರರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಮತ್ತು ಸಾಕ್ಷರತಾ ಸಪ್ತಾಹಕ್ಕೆ ಬಿ.ಎ.ಹರೀಶ್ ಚಾಲನೆ

ಮಡಿಕೇರಿ ಸೆ.15– ಅಂತರರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಮತ್ತು ಸಾಕ್ಷರತಾ ಸಪ್ತಾಹಕ್ಕೆ ಜಿ.ಪಂ. ಅಧ್ಯಕ್ಷರಾದ ಬಿ.ಎ.ಹರೀಶ್ ಅವರು ಮಂಗಳವಾರ ಚಾಲನೆ ನೀಡಿದರು.ನಗರದ ಜಿ.ಪಂ.ಕೆಡಿಪಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ದೀಪ ಬೆಳಗಿ ಚಾಲನೆ ನೀಡಿ ಬಳಿಕ ಮಾತನಾಡಿದ ಜಿ.ಪಂ. ಅಧ್ಯಕ್ಷರು



ಜಿಲ್ಲೆಯಲ್ಲಿ 1.20 ಲಕ್ಷದಷ್ಟು ಅನಕ್ಷರಸ್ಥ ರಿದ್ದು, ಅನಕ್ಷರಸ್ಥರಿಗೆ ಅಕ್ಷರ ಕಲಿಸುವಂತಾಗಬೇಕು ಎಂದು ಅವರು ಹೇಳಿದರು.ಹಿಂದೆ ಸಾಕ್ಷರತಾ ಆಂದೋಲನ ಮಾದರಿಯಲ್ಲಿ ಅಕ್ಷರ ಕಲಿಸಲಾಗು ತ್ತಿತ್ತು. ಅನಕ್ಷರಸ್ಥರಿಗೆ ಅಕ್ಷರ ಕಲಿಸುವ ನಿಟ್ಟಿನಲ್ಲಿ ಇನ್ನಷ್ಟು ಪ್ರಯತ್ನಗಳು ನಡೆಯಬೇಕಿದೆ ಎಂದು ಬಿ.ಎ.ಹರೀಶ್ ಅವರು ತಿಳಿಸಿದರು.ಅನಕ್ಷರಸ್ಥರನ್ನು ಹುಡುಕಿ ಅಕ್ಷರಸ್ಥರನ್ನಾಗಿ ಮಾಡುವ ಕೆಲಸವಾಗಬೇಕು. ಈ ಕಾರ್ಯಕ್ರಮದಲ್ಲಿ ಎಲ್ಲರೂ ಕೈಜೋಡಿಸಿಬೇಕಿದೆ ಎಂದು ಜಿ.ಪಂ.ಅಧ್ಯಕ್ಷರು ಮನವಿ ಮಾಡಿದರು.

ಜಿ.ಪಂ.ಸಿಇಒ ಭನ್ವರ್ ಸಿಂಗ್ ಮೀನಾ ಅವರು ಮಾತನಾಡಿ ಉದ್ಯೋಗದ ಜೊತೆಗೆ ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬದುಕಲು ಶಿಕ್ಷಣ ಅತ್ಯವಶ್ಯ. ಆದ್ದರಿಂದ ಗ್ರಾ.ಪಂ.ಮಟ್ಟದಲ್ಲಿ ಸಮಿತಿ ರಚನೆ ಮಾಡಿ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡುವ ಕೆಲಸವಾಗಬೇಕು ಎಂದು ಅವರು ಹೇಳಿದರು.ಜಿ.ಪಂ.ಮುಖ್ಯ ಯೋಜನಾಧಿಕಾರಿ ಶ್ರೀಕಂಠಮೂರ್ತಿ ಅವರು ಮಾತನಾಡಿ ಆಧುನಿಕ ಜಗತ್ತಿನಲ್ಲಿ ಶಿಕ್ಷಣ ಇಲ್ಲದ ಬದುಕು ಊಹಿಸುವುದು ಕಷ್ಟಸಾಧ್ಯವಾಗಿದೆ. ಆದ್ದರಿಂದ

ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು. ಅಕ್ಷರ ಜ್ಞಾನ ಇದ್ದಲ್ಲಿ ಬದುಕು ಉಜ್ವಲವಾಗಿರುತ್ತದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.ಜಿ.ಪಂ.ಮುಖ್ಯ ಲೆಕ್ಕಾಧಿಕಾರಿ ಬಿ.ಬಿ.ಪುಷ್ಪಾವತಿ ಅವರು ಮಾತನಾಡಿ ಜಿಲ್ಲೆಯಲ್ಲಿ ಶೇ.20 ರಷ್ಟು ಅನಕ್ಷರಸ್ಥರು ಇದ್ದು, ಇವರಿಗೆ ಅಕ್ಷರ ಜ್ಞಾನ ನೀಡಬೇಕು. ವಲಸೆ ಕಾರ್ಮಿಕರು, ಮುಖ್ಯವಾಹಿನಿಯಿಂದ ದೂರ ಇರುವವರಿಗೆ ಶಿಕ್ಷಣ ನೀಡಬೇಕಿದೆ ಎಂದರು.

ಜಿಲ್ಲಾ ಅಕ್ಷರ ದಾಸೋಹ ಶಿಕ್ಷಣಾಧಿಕಾರಿ ಎಂ.ಕೃಷ್ಣಪ್ಪ ಅವರು ಮಾತನಾಡಿ ರಾಷ್ಟ್ರದ ಅಭಿವೃದ್ಧಿ ಶಿಕ್ಷಣವನ್ನು ಅವಲಂಭಿಸಿದೆ. ಆದ್ದರಿಂದ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಬೇಕಿದೆ ಎಂದರು.

ಸಾಹು ಮಹಾರಾಜ, ಸಾವಿತ್ರಿ ಬಾಪುಲೆ ಅವರು 1800 ವರ್ಷದಲ್ಲಿಯೇ ಶಿಕ್ಷಣಕ್ಕೆ ಒತ್ತು ನೀಡಿದ್ದರು. ಮಹಿಳೆಯರಿಗೆ ಶಾಲೆ ತೆರೆದಿದ್ದರು ಎಂದು ಅವರು ಸ್ಮರಿಸಿದರು.ಇಂದಿಗೂ ಸಹ ಗ್ರಾಮೀಣ ಮತ್ತು ನಗರ ಪ್ರದೇಶದ ಸಾಕ್ಷರತೆ ಪ್ರಮಾಣ ವ್ಯತ್ಯಾಸವಿದ್ದು, ಇದನ್ನು ಸರಿಪಡಿಸುವ ಕೆಲಸವಾಗಬೇಕು ಎಂದು ಅವರು ಹೇಳಿದರು.ಜಿ.ಪಂ.ಮುಖ್ಯ ಯೋಜನಾಧಿಕಾರಿ ಶ್ರೀಕಂಠಮೂರ್ತಿ ಅವರು ಅಂತರರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಮತ್ತು ಸಾಕ್ಷರತಾ ಸಪ್ತಾಹ ಕಾರ್ಯಕ್ರಮದ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ವೆಂಕಟೇಶ್, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಮೋಹನ್ ಇತರರು ಇದ್ದರು. ಮೋಹನ್ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು.

# ರೇಷ್ಮೆ ಬೆಳೆಗಾರರ ಖಾತೆಗೆ ಹಣ ಜಮೆ ಆಗದಿದ್ದರೆ ಶಿಸ್ತು ಕ್ರಮ : ಅಧಿಕಾರಿಗಳಿಗೆ ಸಚಿವರ ಸೂಚನೆ

ಕೋಲಾರ, ಸೆ.:– ವಾರದೊಳಗೆ ರೇಷ್ಮೆ ಬೆಳೆಗಾರರ ಖಾತೆಗೆ ಬೆಂಬಲ ಬೆಲೆ ಹಣ ಜಮಾ ಆಗಬೇಕು, ಇಲ್ಲದಿದ್ದಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಕೋಲಾರ ರೇಷ್ಮೆ ಇಲಾಖೆ ಜಂಟಿ ನಿರ್ದೇಶಕರಾದ ಆಂಜನೇಯ ಗೌಡ ಅವರಿಗೆ ರೇಷ್ಮೆ ಇಲಾಖೆ ಸಚಿವ ನಾರಾಯಣಗೌಡ ಎಚ್ಚರಿಕೆ ನೀಡಿದರು.



ಜಿಲ್ಲೆಯ ಶ್ರೀನಿವಾಸಪುರದ ತೋಟಗಾರಿಕೆ ಕ್ಷೇತ್ರದ ಮಾವು ಉತ್ಕೃಷ್ಟ ಕೇಂದ್ರಕ್ಕೆ ಭೇಟಿ ನೀಡಿದ ಬಳಿಕ ಸಚಿವರು ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಬೇರೆ ಎಲ್ಲಾ ಕಡೆ ಹಣ ಸಂದಾಯ ಆಗಿದೆ.

ರೈತರು ಅಭಿನಂದನೆ ಕೂಡ ಸಲ್ಲಿಸಿದ್ದಾರೆ. ಆದರೆ ಕೋಲಾರದಲ್ಲಿ ಮಾತ್ರ ಯಾಕೆ ವಿಳಂಬ ಆಗಿದೆ. ತಕ್ಷಣ ಸಮಸ್ಯೆ ಪರಿಹಾರ ಆಗದಿದಲ್ಲಿ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಲಾಕ್ ಡೌನ್ ಸಂದರ್ಭದಲ್ಲಿ ಹಣ್ಣು, ತರಕಾರಿ, ಹೂವು ಮಾರಾಟವಾಗದೆ ನಷ್ಟವಾಗಿತ್ತು. ಸರ್ಕಾರ ಪರಿಹಾರ ಘೋಷಣೆ ಮಾಡಿದೆ. ಕೆಲವು ಕಡೆ ತಾಂತ್ರಿಕ ಕಾರಣದಿಂದ ರೈತರ ಖಾತೆಗೆ ಹಣ ಜಮೆ ಆಗಿಲ್ಲ. ಅಕಾರಿಗಳು ಎಲ್ಲಾ ಸಮಸ್ಯೆ ಸರಿಪಡಿಸಬೇಕು. ವಾರದೊಳಗೆ ಪರಿಹಾರ ಹಣ ಸಂದಾಯ ಆಗಬೇಕು ಎಂದು ಸೂಚನೆ ನೀಡಿದ್ದಾರೆ.

ಮ್ಯಾಂಗೊ ಬೋರ್ಡ್‌ಗೆ 25 ಕೋಟಿ ರೂ. ವಾರ್ಷಿಕ ಅನುದಾನ ನೀಡುವ ಬಗ್ಗೆ ಚರ್ಚಿಸುವುದಾಗಿ ತಿಳಿಸಿದ ಸಚಿವರು, ಡ್ರಿಪ್ ಇರಿಗೇಷನ್‌ಗೆ ಶೇ. 100ರಷ್ಟು ಸಬ್ಸಿಡಿ ನೀಡಿವ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಮಾತನಾಡುವುದಾಗಿ ತಿಳಿಸಿದರು.

ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ನಾಗೇಶ್ ಮಾತನಾಡಿ, ಕರೋನಾ ಲಾಕ್‌ಡೌನ್ ಸಂದರ್ಭದಲ್ಲಿ ರೈತರ ಮಾವನ್ನು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಮಾರಾಟ ಮಾಡಿಸಲಾಯಿತು. ಜಿಲ್ಲೆಯಲ್ಲಿ ಹಲವು ಪ್ರಸಿದ್ದ ತಳಿಯ ಮಾವನ್ನು ಬೆಳೆಯಲಾಗುತ್ತಿದ್ದು, ದೇಶ ವಿದೇಶಗಳಿಗೆ ರಪ್ತು ಹೆಚ್ಚಿಸಬೇಕು ಆಗ ಉತ್ತಮವಾದ ಬೆಲೆ ಸಿಗುತ್ತದೆ ಎಂದು ತಿಳಿಸಿದರು.

ವಿದಾನ ಪರಿಷತ್ ಸದಸ್ಯ ವೈ.ಎ.ನಾರಾಯಣಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಬೆಳೆಯುವ ಒಟ್ಟು ಮಾವಿನಲ್ಲಿ ಶೇ 34 ರಷ್ಟು ಮಾವನ್ನು ಕೋಲಾರ ಜಿಲ್ಲೆಯಲ್ಲಿಯೇ ಬೆಳೆಯಲಾಗುತ್ತದೆ.

ಮಾವು ಮಂಡಳಿಯು ಇಡಿ ರಾಜ್ಯಕ್ಕೆ ಸಂಬಂದಿಸಿದ್ದಾಗಿದ್ದು, ವಾರ್ಷಿಕ 2 ಕೋಟಿ ಅನುದಾನ ಸಾಲುವುದಿಲ್ಲ. ಆದ್ದರಿಂದ ಕನಷ್ಠ 25 ಕೋಟಿ ಅನುದಾನ ನೀಡಬೇಕು ಎಂದು ಸಚಿವರಲ್ಲಿ ಮನವಿ ಮಾಡಿದರು.

ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರಾದ ಗಾಯಿತ್ರಿ, ಮಾವು ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರಾದ ನಾಗರಾಜ್ ಅವರು ಸೇರಿದಂತೆ ವಿವಿದ ಇಲಾಖೆಯ ಅಕಾರಿಗಳು ಉಪಸ್ಥಿತರಿದ್ದರು.

# ಮೊಬೈಲ್ ಟವರ್ ಸ್ಥಾಪನೆಯನ್ನು ತಡೆಹಿಡಿಯಲು ಜಿಲ್ಲಾಧಿಕಾರಿಗಳಿಗೆ ಮನವಿ

ಬೆಟಗೇರಿ –ನಗರದ ಬಸ್ ನಿಲ್ದಾಣದ ಎದುರಿನ ಸುಭಾಸ ರಸ್ತೆ, ಟರ್ನಲ್ ಪೇಟೆಯಲ್ಲಿರುವ ಶ್ರೀ ರವೀಂದ್ರಸಾ ಹನುಮಂತಸಾ ಪವಾರ ಇವರ ಮಾಲೀಕತ್ವದಲ್ಲಿರುವ ಸಿಟಿ ಸರ್ವೆ ನಂ. 6586/59/ಬಿ2 ಮತ್ತು 6586/59/ಎ2 ಆಸ್ತಿಗಳ ಮೇಲೆ ಕಾನೂನು ಬಾಹೀರವಾಗಿ ಸ್ಥಾಪಿಸುತ್ತಿರುವ ಜಿಂಯೋ ಕಂಪನಿಯ ಮೊಬೈಲ್ ಟವರ್ ಅಳವಡಿಕೆಯ ಕಾಮಗಾರಿಯನ್ನು ತಡೆಯುವಂತೆ ಕೋರಿ ಟರ್ನಲ್ ಪೇಟೆ ಬೆಟಗೇರಿಯ ಇಲ್ಲಿನ ಸಾರ್ವಜನಿಕರು ದಿ. 14–9–2020 ರಂದು ಗದಗ ಜಿಲ್ಲಾಧಿಕಾರಿಗಳಿಗೆ, ನಗರಸಭೆ ಪೌರಾಯುಕ್ತರಿಗೆ, ಉಪವಿಭಾಗಾಧಿಕಾರಿಗಳಿಗೆ, ತಹಶೀಲ್ದಾರ ಕಾರ್ಯಾಲಯ ಹಾಗೂ ಶಹರ ಉಪ ವಿಭಾಗ ಗದಗ ಇವರುಗಳಿಗೆ ಸ್ಥಾನಿಕ ಸಾರ್ವಜನಿಕರ ಸಹಿಯನ್ನು ಒಳಗೊಂಡ ಎರಡನೇ ತಕರಾರು ಅರ್ಜಿಯನ್ನು ಸಲ್ಲಿಸಲಾಯಿತು.



‘ಮನವಿ ಪತ್ರವನ್ನು ಸ್ವೀಕರಿಸಿದ ಅಧಿಕಾರಿಗಳು ಸೂಕ್ತ ಕ್ರಮವನ್ನು ಕೈಗೊಳ್ಳುವದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕೊಟ್ರಪ್ಪ ಮುದಕಪ್ಪ ಶೇಡದ, ರಮೇಶ ರಾಚಪ್ಪ ಪರಕಾಳಿ, ರಾಘವೇಂದ್ರ ಕೃಷ್ಣಪ್ಪ ನೀಲಿ, ಬಸವರಾಜ ಶೇಡದ, ಸಂತೋಷ ಕವಲೂರ, ಗೋಣೆಪ್ಪ ಕರಿ ಸೇರಿದಂತೆ ಓಣಿಯ ಅನೇಕ ಸಾರ್ವಜನಿಕರು ಉಪಸ್ಥಿತರಿದ್ದರು.

# ಜೆಓಸಿ ನೌಕರರಿಗೆ ನಿಶ್ಚಿತ ಪಿಂಚಣಿಗೆ ಶಿಪಾರಸ್ಸು ಮಾಡುವಂತೆ ಮನವಿ

ಗದಗ : ವೃತ್ತಿ ಶಿಕ್ಷಣ ಇಲಾಖೆಯಿಂದ ವಿವಿಧ ಇಲಾಖೆಗಳಲ್ಲಿ ವಿಲೀನಗೊಂಡ ಸರಕಾರಿ ಮತ್ತು ಖಾಸಗಿ ಅನುದಾನಿತ ಶಿಕ್ಷಕರ ಖಾಯಂ ಪೂರ್ವ ಸೇವೆಯನ್ನು ಪರಿಗಣಿಸಿ ನಿಶ್ಚಿತ ಪಿಂಚಣಿ ನೀಡಲು ಶಿಪಾರಸ್ಸು ಮಾಡುವಂತೆ ಆಗ್ರಹಿಸಿ ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ವಿ.ಸಂಕನೂರ ಅವರಿಗೆ ಅಖಿಲ ಕರ್ನಾಟಕ ವೃತ್ತಿ ಶಿಕ್ಷಣ ಇಲಾಖೆಯಿಂದ ವಿವಿಧ ಇಲಾಖೆಗಳಲ್ಲಿ ವೀಲಿನಗೊಂಡ ನೌಕರರ ಸಂಘದಿಂದ ಜಿಲ್ಲಾ ಘಟಕದಿಂದ ಒತ್ತಾಯಿಸಿದರು.



ಈ ಸಂದರ್ಭದಲ್ಲಿ ಜೆಓಸಿ ನೌಕರ ಸಂಘದ ಜಿಲ್ಲಾಧ್ಯಕ್ಷ ಮಹದೇವಯ್ಯ ಅವರು ಮಾತನಾಡಿ, 2011 ರಲ್ಲಿ ವಿಶೇಷ ಕಾನೂನಿನ್ವಯ ವೃತ್ತಿ ಶಿಕ್ಷಣ ಇಲಾಖೆಯಿಂದ ಸರಕಾರದ ವಿವಿಧ ಇಲಾಖೆಗಳಲ್ಲಿ ಮತ್ತು ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ನಮ್ಮ ಸೇವೆಯನ್ನು ವಿಲೀನಗೊಳಿಸಿ ಖಾಯಂಗೊಳಿಸಲಾಗಿದೆ. ಆದರೆ, ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತ ಬಂದಿದ್ದರೂ ನಮ್ಮ ಕಾಯಂ ಪೂರ್ವ ಸೇವೆಯನ್ನು ಪರಿಗಣಿಸಿದೆ ಹೊಸದಾಗಿ ನೇಮಕಗೊಂಡವರಂತೆ ಸೇವಾ ವೀಲಿನಗೊಳಿಸಲಾಗಿದೆ. ಇದರಿಂದ ನಮಗೆ ನಿವೃತ್ತ ನಂತರ ನಿಶ್ಚಿತ ಪಿಂಚಣಿ ದೊರೆಯದೆ ತೊಂದರೆ ಉಂಟಾಗುತ್ತಿದ್ದು ನಿವೃತ್ತಿ ನಂತರದ ಜೀವನ ತುಂಬಾ ದುಸ್ತರವಾಗಲಿದೆ. ಅದ್ದರಿಂದ ನಮ್ಮ ಖಾಯಂ ಪೂರ್ವ ಸೇವೆಯನ್ನು ನಿಶ್ಚಿತ ಪಿಂಚಣಿಗೆ ಪರಿಗಣಿಸುವಂತೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಗೆ ಶಿಪಾರಸ್ಸು ಮಾಡುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಗೌರವಾಧ್ಯಕ್ಷ ರುದ್ರಣ್ಣ ಗುಳಗುಳಿ, ಡಿ.ಕೆ.ಗುಳೇದಗುಡ್ಡ, ವಿ.ಎಸ್.ವಗ್ಗರದ, ಅಮರೇಶ ಸಿ., ಎಸ್.ಡಿ.ರೂಡಗಿ, ಎಸ್.ಬಿ.ಅಸುಂಡಿ, ಜಿ.ಆರ್.ಸಾತೇನಹಳ್ಳಿ, ಎಸ್.ಬಿ.ದೇಸಾಯಿ, ಸಿ.ಸಿ.ಪಾಟೀಲ, ಶ್ರೀಮತಿ ಎಸ್.ಎ ಗಾಡಗೋಳಿ, ವಿ.ವಿ.ನಾಗರೆಡ್ಡಿ, ವಿರುಪಾಕ್ಷಪ್ಪ, ರವೀಶ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಡಾ. ಅಂಬೇಡ್ಕರ ಜೀವನ ಚರಿತ್ರೆ ಪ್ರತಿಯೊಬ್ಬರಿಗೆ ಮಾದರಿ

ಸಂಕೇಶ್ವರ ಸ.–:ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರವರ ಮಹಾನಾಯಕ ಧಾರಾವಾಹಿಯ ಬ್ಯಾನರ್ ಉಧ್ಘಾಟಣೆ ಶಾಸಕ ಉಮೇಶ ಕತ್ತಿ ಇವರ ಹಸ್ತದಿಂದ ಉದ್ಘಾಟಣೆ ಮಾಡಲಾಯಿತು. ಕತ್ತಿಯವರು ಮಾತನಾಡುತ್ತ ಮಹಾನಾಯಕ ಧಾರವಾಹಿಯು ಪ್ರತಿಯೊಬ್ಬರು ವಿಕ್ಷಿಸಿ ಅವರ ಜೀವನ ಶೈಲಿಯನ್ನು ತಮ್ಮ ಜೀವನದಲ್ಲಿ ಅನುಸರಿಸಿಕೊಳ್ಳಿ ಮತ್ತು ಕೇವಲ ಧಾರಾವಾಹಿಯು ದಲಿತರಿಗೆ ಮಾತ್ರ ಸಮಿತವಲ್ಲದೆ ಎಲ್ಲ ಭಾರತಿಯ ನಾಗರಿಕರಿಗೆ ಮಾದರಿಯಾಗಿದೆ ಎಂದು ಹೇಳಿದರು. ಕಾರ್ಯುಕ್ರಮಕ್ಕೆ ಪುರಸಭೆ ಸದಸ್ಯ ಅಮರ ನಲವಡೆ, ವಿವೇಕ ಕೊಳ್ಳಿ, ಮಾಜಿ ನಗರಾದ್ಯಕ್ಷ ಶ್ರಿಕಾಂತ ಹತನೂರೆ, ಗಜಾನನ ಕೋಳ್ಳಿ, ಪುರಸಭೇ ಸದಸ್ಯ ಸುನೀಲ ಪರ್ವತರಾವ, ಸಂಜಯ ನಷ್ಟಿ, ರೋಹನ ನೇಸರಿ, ಸಚೀನ ಭೋಪಳೇ, ನ್ಯಾಯವಾದಿ ವಿಕ್ರಮ ಕರನಿಂಗ, ಶ್ರೀಕಾಂತ ಪರೀಟ, ದೀಪಕ ಬಿಸ್ಸೆ ಸಂತೋಷ ಸತ್ಯನಾಯಿಕ, ರಾಜೇಂದ್ರ ಬೊರಗಾಂವಿ, ಬಾಬೂ ಭೂಸಗೋಳ, ಪವನ ಪಾಟೀಲ ಡಾ, ಅಂಬೇಡ್ಕರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು, ವಂದನಾರ್ಪಣೆ ನ್ಯಾಯವಾದಿ ಪ್ರಮೋದ ಹೊಸಮನಿ ಇವರು ಮಾಡಿದರು




# ಪೋಷಣ ರಥ ಜಾಥಾ: ಪೌಷ್ಟಿಕಾಂಶದ ಮಹತ್ವದ ತಿಳಿವಳಿಕೆ

ಬೆಳಗಾವಿ, ಸೆ.–: ಪೋಷಣ ಅಭಿಯಾನದ ಮಾಸಾಚರಣೆ ಅಂಗವಾಗಿ ನಗರ ಯೋಜನೆಯ ನಗರ ವಲಯದ ವತಿಯಿಂದ ಪಿ.ಕೆ.ಕ್ವಾರ್ಟರ್ಸನಲ್ಲಿ "ಪೋಷಣ ರಥ ಜಾಥಾ" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ನಗರ ವಲಯದ ವತಿಯಿಂದ ಏರ್ಪಡಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ ಪೌಷ್ಟಿಕಾಂಶದ ಬಗ್ಗೆ ಅರಿವು ಮೂಡಿಸಲಾಯಿತು.



ಹಿರಿಯ ಮೇಲ್ವಿಚಾರಕಿ ಜ್ಯೋತಿ ಇಂಡಿ ನೇತೃತ್ವ ವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಮೇಲ್ವಿಚಾರಕಿ ಭಾರತಿ ಹಿರೇಮಠ ಅವರು, ಮಕ್ಕಳ ಬೆಳವಣಿಗೆಯಲ್ಲಿ ಪೌಷ್ಟಿಕಾಂಶದ ಮಹತ್ವ ಮತ್ತು ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಗುರುತಿಸುವಿಕೆಯ ಕುರಿತು ಮಾಹಿತಿಯನ್ನು ನೀಡಿದರು.ನಗರ ವಲಯದ ಎಲ್ಲ ಅಂಗನವಾಡಿಗಳ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಪ್ರವಾಹ ಪೀಡಿತ ಪ್ರದೇಶಗಳ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಶಿಕ್ಷಕ ಕಲ್ಯಾಣ ನಿಧಿಯಲ್ಲಿ ಉಚಿತ ಕಲಿಕೋಪಕರಣ ವಿತರಣೆ

ರಾಮದುರ್ಗ: ಶೈಕ್ಷಣಿಕ ಕ್ಷೇತ್ರದ ಸುಧಾರಣೆಗೆ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದರೂ ಸಹಿತ ಖಾಸಗಿ ಶಿಕ್ಷಣ ಸಂಸ್ಥೆಗಳಂತೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಸರ್ಕಾರಿ ಶಾಲೆಗಳಲ್ಲಿ ದೊರೆಯುದೆ ಇರುವುದು ವಿಷಾಧನೀಯ ಎಂದು ಶಾಸಕ ಮಹಾದೇವಪ್ಪ ಯಾದವಾಡ ಹೇಳಿದರು.



ಪಟ್ಟಣದ ನೇತಾಜಿ ಸುಭಾಸಚಂದ್ರಭೋಸ್ ಸರ್ಕಾರಿ ಪ್ರೌಢಶಾಲೆಯಲ್ಲಿ 2019–20ನೇ ಸಾಲಿನಲ್ಲಿ ಪ್ರವಾಹ ಪೀಡಿತ ಪ್ರದೇಶಗಳ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಶಿಕ್ಷಕ ಕಲ್ಯಾಣ ನಿಧಿಯಲ್ಲಿ ಉಚಿತ ಕಲಿಕೋಪಕರಣ ವಿತರಣೆ ಮಾಡಿ ಮಾತನಾಡಿದ ಅವರು, ನೆರೆ ಸಂತ್ರಸ್ತರ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಬಾರದು ಎಂದು ಸರ್ಕಾರ ಉಚಿತವಾಗಿ ನೀಡುತ್ತದೆ. ವಿದ್ಯಾರ್ಥಿಗಳು ಇದರು ಪ್ರಯೋಜನ ಪಡೆದು ಉತ್ತಮ ಶಿಕ್ಷಣ ಪಡೆಯಬೇಕೆಂದು ಹೇಳಿದರು.

ತಾಲೂಕಿನ ಕೆಲ ಶಾಲೆಗಳಲ್ಲಿ ಶಿಕ್ಷಕರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಸರಿಯಾಗಿ ಉಸ್ತುವಾರಿ ಮಾಡಿ ತಾಲೂಕಿನ ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಕ್ಷೇತ್ರ ಶಿಕ್ಷಾಧಿಕಾರಿ ಎಮ್ ಆರ್ ಅಲಾಸಿ ಪ್ರಾಸ್ತಾವಿಕವಾಗಿ ಮಾತನಾಡಿ ಶಿಕ್ಷಕರು ಸಮಯ ಪ್ರಜ್ಞೆಯಿಂದ ಕೆಲಸ ಮಾಡ ಸರ್ಕಾರದ ಯೋಜನೆಗಳನ್ನು ಮಕ್ಕಳಿಗೆ ಮುಟ್ಟಿಸುವ ಕೆಲಸ ಮಾಡಿದರೆ ಸರ್ಕಾರದ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳಲು ಸಾಧ್ಯವೆಂದು ಹೇಳಿದರು.

ದೈಹಿಕ ಶಿಕ್ಷಣಾಧಿಕಾರಿ ಪಿ. ಖ. ಕಾಲವಾಡ, ಮುಖೋಪಾಧ್ಯಾಯರಾದ ಎಸ್. ಆರ್. ಕಂಟಿಕರ, ಎಮ್. ಪಿ. ರಡ್ಡೇರ, ಎಮ್. ಡಿ. ಮಂಕಾದಾರ, ವಾಯ್. ವಿ. ಮಳಲಿ ಹಾಗೂ ಶಿಕ್ಷಣ ಸಂಯೋಜಕ ಅನಂತಜೋಷಿ , ಶಿಕ್ಷಕ ಶೇಖ ನಿರೂಪಿಸಿದರು.

# ಜಿಲ್ಲಾ ಪಂಚಾಯ್ತಿ ಸಾಮಾನ್ಯ ಸಭೆ

ರಾಮದುರ್ಗ: ಮಲಪ್ರಭಾ ಬಲದಂಡೆ ಕಾಲುವೆ ಶಿರಸಂಗಿ ಉಪವಿಭಾಗದ ವ್ಯಾಪ್ತಿಯ ಮುಳ್ಳೂರು, ಕಡ್ಲಿಕೊಪ್ಪ ಸೇರಿದಂತೆ ಆರು ಗ್ರಾಮಗಳ ಜನರ ಜಮೀನುಗಳಿಗೆ ನೀರು ತಲುಪುತ್ತಿಲ್ಲ ಮತ್ತು ಯಾವದೇ ದುರಸ್ಥಿ ಕಾರ್ಯ ನಡೆಯುತ್ತಿಲ್ಲ ಶಿರಸಂಗಿ ಉಪವಿಭಾಗದಲ್ಲಿ ಬರುವ ಗ್ರಾಮಗಳ ಕಾರ್ಯವನ್ನು ರಾಮದುರ್ಗ ವಿಭಾಗಕ್ಕೆ ವರ್ಗಾವಣೆಗೆ ಅಧಿಕಾರಿಗಳು ಕ್ರಮಕೈಗೊಳ್ಳಬೇಕು ಎಂದು ಜಿಲ್ಲಾ ಪಂಚಾಯ್ತಿ ಸದಸ್ಯ ರೇಣಪ್ಪ ಸೋಮಗೊಂಡು ಹೇಳಿದರು.



ತಾಲೂಕಾ ಪಂಚಾಯ್ತಿ ಸಭಾಭವನದಲ್ಲಿ ಜಿಪಂ ಉಪಕಾರ್ಯದರ್ಶಿ ಡಿ. ಎಂ. ಜಕ್ಕಪ್ಪಗೋಳ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಪಂಚಾಯ್ತಿ ಸಾಮಾನ್ಯ ಸಭೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, 7 ಗ್ರಾಮಗಳಿಗೆ ನೀರಾವರಿ ಇದ್ದು ಇಲ್ಲದಂತಾಗಿದೆ ಅಲ್ಲದೆ ಈ ಪ್ರದೇಶದ ಕಾಲುವೆ ರೀಪೆರಿ ಮತ್ತು ಹೂಳೆತ್ತಲು ಅನುದಾನವನ್ನು ಸವದತ್ತಿ ನೀರಾವರಿ ಇಲಾಖೆಯ ಅಧಿಕಾರಿಗಳು ನೀಡದೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಹೇಳಿದರು.

ಇಲ್ಲಿನ ಸಮಸ್ಯೆಗಳ ಕುರಿತು ಯಾರಿಗೆ ಹೇಳುವುದು ಈ ಸಮಸ್ಯೆಗಳ ಪರಿಹಾರಕ್ಕೆ ಎಂಎಲ್‌ಬಿಸಿ ರಾಮದುರ್ಗಕ್ಕೆ ವರ್ಗಾವಣೆ ಮಾಡಬೇಕು ಎಂದು ನೀರಾವರಿ ಇಲಾಖೆಯ ಅಧಿಕಾರಿಗಳನ್ನು ಪ್ರಶ್ನಿಸಿದರು.ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಆಹಾರ ಸಮರ್ಪಕವಾಗಿ ವಿತರಣೆಯಾಗುತ್ತಿಲ್ಲ ಶಿಶು ಅಭಿವೃದ್ಧಿ ಅಧಿಕಾರಿಗಳು ಸರಿಯಾಗಿ ಉಸ್ತುವಾರಿ ಮಾಡಬೇಕು ಎಂದು ಜಿಲ್ಲಾ ಪಂಚಾಯ್ತಿ ಸದಸ್ಯ ಜಹೂರ ಹಾಜಿ ಶಿಶು ಅಭಿವೃದ್ಧಿ ಅಧಿಕಾರಿ ಸಿಂಗಾರೆವ್ವ ಒಂಟಮೋರಿ ಅವರಿಗೆ ಹೇಳಿದರು. ಯಾವ ಅಂಗನವಾಡಿ ಎಂದು ತಿಳಿಸಿದರೆ ಕ್ರಮ ಕೈಗೊಳ್ಳುವುದಾಗಿ ಸಿಡಿಪಿಓ ಸಿಂಗಾರೆವ್ವ ಹೇಳಿದಾಗ ಕೆಲ ಅಂಗನವಾಡಿಗಳಿದ್ದು ಎಲ್ಲ ಕಡೆ ಸಮರ್ಪಕ ಉಸ್ತುವಾರಿ ಮಾಡಬೇಕೆಂದು ಹಾಜಿ ಹೇಳಿದರು.ಈಪಂ ಕುಡಿಯುವ ನೀರು ಪೂರೈಕೆ ಎಇಇ ಶ್ರೀನಿವಾಸ ವಿಶ್ವಕರ್ಮ ಜಲಮಿಶನ್ ಯೋಜನೆಯಡಿ ತಾಲೂಕಿನ 17 ಸಾವಿರಕ್ಕೂ ಹೆಚ್ಚು ಕುಟುಂಬಗಳ ಮನೆಗಳಿಗೆ ಕುಡಿಯುವ ನೀರು ಪೂರೈಕೆ ಮಾಡಲಾಗುವುದು ಎಂದು ತಿಳಿಸಿದರು.ಸಸಭೆಯಲ್ಲಿ ತಾಲೂಕಾ ಮಟ್ಟದ ಅಧಿಕಾರಿಗಳು ಅಭಿವೃದ್ಧಿ ಕಾರ್ಯದ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ತಾಪಂ ಇಓ ಮುರಳೀಧರ ದೇಶಪಾಂಡೆ ಸ್ವಾಗತಿಸಿದರು.

ತಾಲೂಕಿನಲ್ಲಿ 6 ಜನ ಜಿಲ್ಲಾ ಪಂಚಾಯ್ತಿ ಸದಸ್ಯರಿದ್ದರು ಸಭೆಯಲ್ಲಿ ಕೇವಲ ಇಬ್ಬರು ಸದಸ್ಯರು ಮಾತ್ರ ಹಾಜರಿದ್ದರು. ನಾಲ್ಕು ಜನ ಸದಸ್ಯರ ಅನುಪಸ್ಥಿತಿ ಎದ್ದು ಕಾಣುತ್ತಿತ್ತು. ಜಿಪಂ ಸದಸ್ಯರಿಗಾಗಿ ನಡೆದ ಸಭೆಯಲ್ಲಿ ಹಾಜರಿರದೆ ಜಿಪಂ ಸಭೆಯಲ್ಲಿ ತಾಲೂಕಿನ ಅಭಿವೃದ್ಧಿ ಕುರಿತು ಯಾವ ಚರ್ಚೆ ಮಾಡುತ್ತಾರೆ ಎಂದು ಕೆಲ ಅಧಿಕಾರಿಗಳು ತಮ್ಮತಮ್ಮಲ್ಲಿ ಮಾತನಾಡುತ್ತಿರುವುದು ಕಂಡು ಬಂದಿತು.